ಕರ್ನಾಟಕ ಸರ್ಕಾರ

ಕೃಷಿ ಇಲಾಖೆ

ಸಂ.ಬೆಸವಿ/ಸುತ್ತೋಲೆ - ಪವ್ಯ/2020-21

ಕೃಷಿ ಆಯುಕ್ತಾಲಯ
ಶೇಷಾದ್ರಿ ರಸ್ತೆ, ಬೆಂಗಳೂರು-01
ದಿನಾಂಕ:21-08-2020

ಸುತ್ತೋಲೆ-2

ವಿಷಯ: 2020-21ನೇ ಸಾಲಿನ ಬೆಳೆ ಸಮೀಕ್ಷೆ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕೈಗೊಳ್ಳಬೇಕಾದ ಕ್ರಮಗಳ ಕುರಿತು.

ಉಲ್ಲೇಖ:ಸರ್ಕಾರದ ಆದೇಶ ಸಂಖ್ಯೆ ಕೃಇ/83/ಕೃಕೈಉ/2020/, ದಿ.07-08-2020, ಬೆಂಗಳೂರು.

- - -

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, 2020-21ನೇ ಸಾಲಿನಲ್ಲಿ ಬೆಳೆ ಸಮೀಕ್ಷೆ ಯೋಜನೆಯನ್ನು ಸಿಆಸುಇ (ಇ-ಆಡಳಿತ) ರವರು ಅಭಿವೃದ್ಧಿ ಪಡಿಸಿರುವ ಮಾರ್ಪಡಿಸಿದ ರೈತರ ಮೊಬೈಲ್ ಆಪ್ ಬಳಸಿಕೊಂಡು ಅನುಷ್ಠಾನಗೊಳಿಸಲು ಸರ್ಕಾರಿ ಆದೇಶ ಹೊರಡಿಸಲಾಗಿದೆ. ಮುಂದುವರೆದು ಈ ಕೆಳಕಂಡ ವಿಷಯಗಳ ಕುರಿತು ಅಗತ್ಯ ಕ್ರಮ ಕೈಗೊಳ್ಳುವುದು.

1. ಕ್ಷೇತ್ರ ಮಟ್ಟದಲ್ಲಿ ಬೆಳೆ ಸಮೀಕ್ಷೆ ನಡೆಸುವಾಗ ಕೆಲವೊಂದು ಸಂದರ್ಭಗಳಲ್ಲಿ ಸರ್ವೇ / ಹಿಸ್ಸಾ ನಂಬರ್ ಗಳು ಗೋಚರಿಸದೇ ಬೆಳೆ ಸಮೀಕ್ಷೆ ಕಾರ್ಯಕ್ಕೆ ಅಡಚಣಡವುಂಟಾಗುತ್ತದೆ. ಅಂತಹ ಸಂದರ್ಭಗಳಲ್ಲಿ ಸರ್ವೇ / ಹಿಸ್ಸಾ ನಂಬರ್ ಗಳನ್ನು ನಿಖರವಾಗಿ ಗುರುತಿಸಲು ಸಹಾಯಕ್ಕಾಗಿ ದಿಶಾಂಕ್ ಆಪ್ ಅನ್ನು ಕಡ್ಡಾಯವಾಗಿ ಬಳಸುವಂತೆ ಖಾಸಗಿ ನಿವಾಸಿಗಳು / ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡುವುದು.
2. ಕ್ಷೇತ್ರ ಮಟ್ಟದಲ್ಲಿ ರೈತರ ಪರವಾಗಿ ಬೆಳೆ ಸಮೀಕ್ಷೆ ನಡೆಸಿ ವಿವರಗಳನ್ನು ಅಪ್‌ಲೋಡ್ ಮಾಡುವ ಸಂದರ್ಭಗಳಲ್ಲಿ ರೈತರ ಮೊಬೈಲ್ ಸಂಖ್ಯೆ ನಮೂದಿಸಿ, ಛಾಯಾಚಿತ್ರಗಳಲ್ಲಿ ಸ್ವತ: ರೈತರು ಅಥವಾ ಅವರ ಕುಟುಂಬದವರು ಕಡ್ಡಾಯವಾಗಿ ಇರುವುದನ್ನು ಖಚಿತಪಡಿಸಿಕೊಳ್ಳುವುದು.
3. ಆದಷ್ಟು ಖಾಸಗಿ ನಿವಾಸಿಗಳು/ಅಧಿಕಾರಿಗಳು ಸಾಧ್ಯವಾದ ಮಟ್ಟಿಗೆ ರೈತ ಕುಟುಂಬದಲ್ಲಿ ಆನ್ಡ್ರೈಡ್ ಮೊಬೈಲ್ ಹೊಂದಿರುವ ಯುವಕರಿಗೆ ಬೆಳೆ ಸಮೀಕ್ಷೆ ಆಪ್ ಕುರಿತು ಸೂಕ್ತ ತರಬೇತಿ ಮತ್ತು ಪ್ರಚಾರ ನೀಡಿದ ಪಕ್ಷದಲ್ಲಿ ತರಭೇತಿ ಪಡೆದಂತಹ ಯುವಕರು ತಮ್ಮ ತಾಕುಗಳನ್ನು ಸಮೀಕ್ಷೆ ಮಾಡುವುದಲ್ಲದೆ ತಮ್ಮ ನೆಂಟರು ಹಾಗೂ ಸ್ನೇಹಿತರ ತಾಕುಗಳನ್ನು ಸಹ ಸಮೀಕ್ಷೆ ಮಾಡಲು ಮುಂದಾಗುವುದರಿಂದ ಈ ಕುರಿತು ಸೂಕ್ತ ಕ್ರಮವಹಿಸುವುದು.

ಕೃಷಿ ಆಯುಕ್ತರು 21/08/20

ಪ್ರತಿಯನ್ನು

ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಮಾಹಿತಿಗಾಗಿ ಕಳುಹಿಸಿದೆ.

ಎಲ್ಲಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರಿಗೆ ಕಳುಹಿಸುತ್ತಾ ಸದರಿ ಸುತ್ತೋಲೆಯನ್ನು ವಿಭಾಗ, ತಾಲ್ಲೂಕು & ಹೋಬಳಿ ಮಟ್ಟಕ್ಕೆ ತಲುಪಿಸುವಂತೆ ಸೂಚಿಸಿ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.